






ದಿನಾಂಕ: 22–04–2023 ರಂದು ಹುಬ್ಬಳ್ಳಿಯ ಹತ್ತಿರದ ಛಬ್ಬಿ ಬಳಿ ತಮ್ಮದೇ ಆದ ಫಾರ್ಮ್ ಹೌಸ್‌ನಲ್ಲಿ ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯವರು ತಮಗೆ ಬಿಡುವು ಸಿಕ್ಕಾಗಲೆಲ್ಲ ತೋಟದ ಮನೆಗೆ ಧಾವಿಸಿ, ಟ್ರಾಕ್ಟರ್ ಮೂಲಕ ಹೊಲವನ್ನು ಹರಗುವ ಕೆಲಸ ಮಾಡಿ, ನಂತರ ಅಲ್ಲಿದ್ದ ಎತ್ತುಗಳ ಮೈ ತೊಳೆಯುವ ಕಾರ್ಯ ಮಾಡಿದಾಗ ಆಳುಗಳೆ ಬೆಕ್ಕಸ ಬೆರಗಾಗಿ ನೋಡುತ್ತ ನಿಂತರು. ರಾಜಕಾರಣದಲ್ಲಿ ಇಷ್ಟೊಂದು ಎತ್ತರದ ಸ್ಥಾನವನ್ನು ಅಲಂಕರಿಸಿರುವ ವ್ಯಕ್ತಿ, ಇಲ್ಲಿ ತೋಟದಲ್ಲಿ ಅದೆಷ್ಟು ಸಾಮಾನ್ಯರಾಗಿ ರೈತ ಕಾರ್ಮಿಕನಂತೆ ದುಡಿಯುವುದನ್ನು ಕಂಡಾಗ ಬಸವಣ್ಣನವರ ಕಾಯಕ ಯೋಗ, ತತ್ವ ನೆನಪಾಗುತ್ತದೆ. ಹೀಗೆ ಹೊಲದಲ್ಲಿನ ಎಲ್ಲ ಕಾರ್ಯಗಳನ್ನು ಯಾವಾಗಲೂ ಮನಸಾರೆ ಮಾಡುವ ಮೂಲಕ ಸಭಾಪತಿಯವರು ಈ ಸಾರೆ ಬಸವ ಜಯಂತಿಗೆಂದು ಕಾಯಕ ವೃತ್ತಿ ಕೈಗೊಂಡು ರೈತರಿಗೆ ಮಾದರಿಯಾದರು.